17.12.24

43

**ರಿಪಬ್ಲಿಕ್ ಕನ್ನಡ ಸುದ್ದಿ ವಾಹಿನಿಯಲ್ಲಿ "ಖಾನಾಪುರ ತಾಲೂಕಿನಲ್ಲಿ ಕಣ್ಣೀರ ಖಾನಾಪುರ ಅಭಿಯಾನ" ಎಂಬ ತಲೆಬರಹದ ಅಡಿಯಲ್ಲಿ ಪ್ರಸಾರವಾಗಿರುವ ವರದಿಯನ್ನು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್. ರವರ ಶೂನ್ಯ ವೇಳೆಯ ಪ್ರಸ್ತಾಪಿಸಿರುವ ಪ್ರಶ್ನೆಗೆ ಸಂಬಂಧಿಸಿದಂತೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

**ಪ್ರಶ್ನೆ:-** ಬೆಳಗಾವಿ ಜಿಲ್ಲೆಯಲ್ಲಿರುವ ಖಾನಾಪುರ ತಾಲೂಕು ಬಹುತೇಕ ಪಶ್ಚಿಮ ಘಟ್ಟ ಪ್ರದೇಶದಲ್ಲಿದೆ. ಹಾಗಾಗಿ ಖಾನಾಪುರ ತಾಲೂಕಿನ ಕಾಡಂಚಿನ ಜನರ ನೈಜ ಸ್ಥಿತಿ ಏನಿದೆ ಎನ್ನುವುದರ ಬಗ್ಗೆ ರಿಪಬ್ಲಿಕ್ ಕನ್ನಡ ಸುದ್ದಿವಾಹಿನಿ ತಂಡವು ಕಣ್ಣೀರ ಖಾನಾಪುರ ಅಭಿಯಾನದ ಮೂಲಕ ಒಂದು ಗ್ರೌಂಡ್ ರಿಪೋರ್ಟ್ ಮಾಡಿ ಸರಣಿ ವರದಿ ಮೂಲಕ ಕಾಡಂಚಿನ ಜನರ ಬದುಕು ಬವಣೆಯನ್ನು ತೆರೆದಿಟ್ಟಿದೆ. ಸ್ವಾತಂತ್ರ್ಯ ಬಂದು 78 ವರ್ಷ ಕಳೆದರೂ ಇಲ್ಲಿನ 15 ಕ್ಕೂ ಅಧಿಕ ಗ್ರಾಮಗಳು ಕನಿಷ್ಠ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದು ದುರ್ದೈವ, ಪಡಿತರ ಹೊರತುಪಡಿಸಿ ಸರಕಾರದ ಮೇಲ ಯಾವುದೇ ಸೌಲಭ್ಯಗಳಿಂದ ಈ ಕಾಡಂಚಿನ ಜನರು ವಂಚಿತರಾಗಿದ್ದಾರೆ.

ವನ್ಯಪ್ರಾಣಿಗಳ ಹಾವಳಿ, ಒಂದು ಕಡೆಯಾದರೆ, ಕರೆಂಟ್, ರಸ್ತೆ ಸೇರಿ, ಆಸ್ಪತ್ರೆ, ವಸತಿ, ಶಿಕ್ಷಣ ಹೀಗೆ ಕನಿಷ್ಠ ಮೂಲ ಸೌಕರ್ಯಗಳು ಸಿಗದೇ ಇಲ್ಲಿನ ಜನರು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಈ ಜನ ಕಲಿಯುವುದು ಹೆಚ್ಚೆಂದರೆ 5ನೇ ತರಗತಿ ಮಾತ್ರ. ನಗರಕ್ಕೆ ಬರಬೇಕಾದರೆ 15 ರಿಂದ 20 ಕಿ.ಮೀ. ನಡೆದುಕೊಂಡೆ ಬರಬೇಕು, ಸರಿಯಾದ ರಸ್ತೆ ಸಂಪರ್ಕ ಇಲ್ಲದೆ ತುರ್ತು ಸಂದರ್ಭಗಳಲ್ಲಿ ಆಸ್ಪತ್ರೆಗೆ ಹೋಗಲು ಸಹ ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಹೆಣವನ್ನು ಚಟ್ಟದ ಮೇಲೆ ಹೊತ್ತು ನಗರಕ್ಕೆ ತರಬೇಕಾದ ದಯಾನೀಯ ಸ್ಥಿತಿ ಇವರದ್ದು. ಮಳೆಗಾಲದಲ್ಲಿ ಎಂಟು ತಿಂಗಳು ಹೊರ ಪ್ರಪಂಚದ ಸಂಪರ್ಕವೇ ಇಲ್ಲದೆ ಜೀವನ ಸಾಗಿಸುತ್ತಾರೆ. ಪಡಿತರಕ್ಕೆ 10 ರಿಂದ 15 ಕಿ.ಮೀ. ನಡೆದು ಹೋಗುವ ಜನರ ಬಳಿ ಆಧಾರ್, ಚುನಾವಣಾ ಗುರುತಿನ ಚೀಟಿ ಸೇರಿ ಎಲ್ಲಾ ದಾಖಲೆಗಳಿವೆ. ಈ ಕಾಡಂಚಿನ ಜನರನ್ನು ಚುನಾವಣೆಯಲ್ಲಿ ವೋಟು ಹಾಕೋದಕ್ಕೆ ಮಾತ್ರ ಸರಕಾರ ಸೀಮಿತಗೊಳಿಸಿದೆ. ಇದು ಒಂದೆರಡು ಹಳ್ಳಿಗಳ ಕಥೆಯಲ್ಲ ಖಾನಾಪೂರ ತಾಲೂಕಿನ ಗವಾಳಿ, ಕೃಷ್ಣಾಪುರ, ಪಾಸ್ತೋಲಿ, ಕೊಂಗಳಾ, ತಳೇವಾಡಿ, ಜೋರ್ಡಾನ್, ಚಾಪೋಲಿ, ಕಾಪೋಲಿ, ಮುದಗ್ಗೆ, ಜಿರೇಖಣಿ, ಅಮಗಾಂವ, ಮೆಂಡಿಲ್ ಸೇರಿದಂತೆ 64 ಹಳ್ಳಿಗಳ ಕಣ್ಣೀರಿನ ಕಥೆ ಆಗಿದೆ. ಕಸ್ತೂರಿ ರಂಗನ್ ವರದಿ ಪ್ರಕಾರ ೮೪ ಹಳ್ಳಿಗಳು ಸ್ಥಳಾಂತರಕ್ಕೆ ಅರ್ಹವಾಗಿವೆ. ಈ ಕಾಡಂಚಿನ ಜನರಿಗೆ ಸರಕಾರ ಸೂಕ್ತ ಪರಿಹಾರ ಕೊಟ್ಟು ಸ್ಥಳಾಂತರ ಮಾಡಬೇಕು. ಇವರ ಹೆಸರಿನಲ್ಲಿ ಜಮೀನು ಎಷ್ಟಿದೆ ಅಷ್ಟು ಜಮೀನು ಮತ್ತೆ ಕೊಡಬೇಕು. ಜೀವನೋಪಾಯಕ್ಕೆ ಪ್ರತೀ ಕುಟುಂಬಕ್ಕೆ ತಲಾ 15 ಲಕ್ಷ ಪರಿಹಾರ ಕೊಡಬೇಕು. ಎಲ್ಲಾ ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಮನೆ ನಿರ್ಮಾಣ ಮಾಡಿ ಬದುಕು ಕಲ್ಪಿಸಿಕೊಡಬೇಕೆಂದು ಸರಕಾರವನ್ನು ಆಗ್ರಹಿಸುತ್ತೇನೆ.

**ಉತ್ತರ:-** ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನಲ್ಲಿ ಭೀಮಗಡ ಅಭಯಾರಣ್ಯವಿದ್ದು, ಸದರಿ ಅಭಯಾರಣ್ಯ ಪ್ರದೇಶದಲ್ಲಿರುವ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರು ಸ್ವಯಂ ಪ್ರೇರಿತರಾಗಿ ಅಭಯಾರಣ್ಯ ಪ್ರದೇಶದಿಂದ ಹೊರಬರಲು ಇಚ್ಛಿಸಿ, ಮನವಿ ಸಲ್ಲಿಸಿದ ಗ್ರಾಮಗಳ ಕುಟುಂಬಗಳಿಗೆ ಪುನರ್ವಸತಿ ವ್ಯವಸ್ಥೆ ಕಲ್ಪಿಸುವ ಪ್ರಕ್ರಿಯೆಯು ಚಾಲನೆಯಲ್ಲಿದ್ದು, ಈ ಕುರಿತು ಮೊದಲ ಹಂತದಲ್ಲಿ ದಿನಾಂಕ 10-08-2024 ರಂದು ಜಿಲ್ಲಾ ಮಟ್ಟದ ಸಮಿತಿಯ ಸಭೆಯನ್ನು ಜರುಗಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಭೀಮಗಡ ಅಭಯಾರಣ್ಯದಲ್ಲಿ ಬರುವ ಹಳ್ಳಿಗಳ ಗ್ರಾಮಸ್ಥರ ಸಭೆಯನ್ನು ಆಯಾ ಗ್ರಾಮಗಳಲ್ಲಿ ಇಲಾಖಾ ಅಧಿಕಾರಿಗಳ/ ಸಿಬ್ಬಂದಿಗಳ ಮತ್ತು ಗ್ರಾಮಸ್ಥರ ಮುಖಂಡರೊಂದಿಗೆ ಜರುಗಿಸಲಾಗಿದೆ.

ಭೀಮಗಡ ಅಭಯಾರಣ್ಯದ ಒಳಗೆ ಬರುವ ಗ್ರಾಮಗಳಲ್ಲಿ ಒಂದಾದ ತಳೆವಾಡಿ ಗ್ರಾಮದ 28 ಕುಟುಂಬಗಳು ಅಭಯಾರಣ್ಯ ದಿಂದ ಹೊರಗಡೆ ಹೋಗಲು ಇಚ್ಛಿಸಿದ್ದು, ಈ ಕುರಿತು ಪ್ರತಿ ಕುಟುಂಬಕ್ಕೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (NTCA) ನಿಯಮಗಳಂತೆ ಪ್ರಸ್ತುತ ವರ್ಷದಲ್ಲಿ ರೂ. 15.00 ಲಕ್ಷಗಳಂತೆ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕಾಡಂಚಿನ ಗ್ರಾಮಗಳಲ್ಲಿರುವ ಜನರು ಸ್ವಯಂ ಪ್ರೇರಿತರಾಗಿ ಸ್ಥಳಾಂತರಗೊಳ್ಳಲು ಇಚ್ಛಿಸಿ ಮನವಿ ಸಲ್ಲಿಸಿದಲ್ಲಿ ಅವರಿಗೆ ಪುನರ್ವಸತಿ ಕಲ್ಪಿಸುವ ವಿಚಾರ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 53 ಎಫ್‌ಎಫ್ಎಂ 2021 ದಿನಾಂಕ: 16.03.2024 ಮಾರ್ಗಸೂಚಿಗೆ ಒಳಪಟ್ಟಿರುತ್ತದೆ

ಸಂಖ್ಯೆ: ಅಪಜೀ 38 ಎಫ್‌ಎಸ್‌ಡಬ್ಲ್ಯೂ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು